# ಎನ್‌ಐಟಿಕೆಯಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣ



**ಸುರತ್ಕಲ್, ಮೇ 7:** ಸುರತ್ಕಲ್‌ನ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕದ ರಸಾಯನಶಾಸ್ತ್ರ ವಿಭಾಗ ಮತ್ತು ಕೇಂದ್ರೀಯ ಸಂಶೋಧನಾ ಸೌಲಭ್ಯ (ಸಿಆರ್‌ಎಫ್) ವತಿಯಿಂದ ಮೇ 7ರಿಂದ ಐದು ದಿನಗಳವರೆಗೆ ನಡೆಯಲಿದ್ದು ಶೆಲ್ ಇಂಡಿಯಾದ ಉಪಾಧ್ಯಕ್ಷ ಡಾ। ಅಜಯ್ ಮೆಹ್ತಾ ಉದ್ಘಾಟಿಸಿದರು. ಗುಜರಾತ್‌ನ ಭಾವನಗರದ ಸಿಎಸ್‌ಐಆರ್ -ಸಿಎಸ್‌ಎಂಸಿಆರ್‌ಐ ನಿರ್ದೇಶಕ ಪ್ರೊ। ಕಣ್ಣನ್ ಶ್ರೀನಿವಾಸನ್ ಗೌರವ . ಅತಿಥಿಯಾಗಿದ್ದರು. ಎನ್ ಐಟಿಕೆ ಸುರತ್ಕಲ್‌ನ ಸಂಶೋಧನೆ ಮತ್ತು ಸಲಹಾ ವಿಭಾಗದ ಡೀನ್ ಪ್ರೊ। ಉದಯ್ ಭಟ್ ಅಧ್ಯಕ್ಷತೆ ವಹಿಸಿದ್ದರು.

ಐಐಟಿಗಳು, ಎನ್‌ಐಟಿಗಳು, ರಾಜ್ಯ ವಿಶ್ವವಿದ್ಯಾಲಯಗಳು ಮತ್ತು ಖಾಸಗಿ ಸಂಸ್ಥೆಗಳು ಸೇರಿದಂತೆ ಭಾರತದಾದ್ಯಂತದ ಉನ್ನತ ಸಂಸ್ಥೆಗಳ 200 ಕ್ಕೂ ಹೆಚ್ಚು ರಸಾಯನಶಾಸ್ತ್ರ ವಿದ್ವಾಂಸರು ಭಾಗವಹಿಸುತ್ತಿದ್ದಾರೆ.

ಐಐಟಿ ಹೈದರಾಬಾದ್, ಐಐಟಿ ಧಾರವಾಡ, ಐಐಟಿ ರೋಪರ್, ಎನ್‌ಐಟಿ ಕ್ಯಾಲಿಕಟ್, ಐಐಎಸ್‌ಇಆರ್ ತಿರುಪತಿ, ಸಿಎಸ್ ಐಆರ್-ಸಿಎಸ್‌ಎಂಸಿಆರ್‌ಐ, ಸಿಎಸ್‌ಐಆರ್ ಕಾರೈಕುಡಿ, ವಿಐಟಿ ವೆಲ್ಲೂರು ಮತ್ತು ಜೆಎನ್‌ಸಿಎಎಸ್‌ಆರ್ ಬೆಂಗಳೂರು ಸೇರಿದಂತೆ ಸಂಸ್ಥೆಗಳ ಪ್ರಖ್ಯಾತ ಶಿಕ್ಷಣ ತಜ್ಞರು ಮತ್ತು ವಿಜ್ಞಾನಿಗಳಿಂದ ಹದಿಮೂರು ತಜ್ಞ ಉಪನ್ಯಾಸಗಳು ಮತ್ತು ಎನ್‌ಐಟಿಕೆ ಸುರತ್ಕಲ್ ತಜ್ಞರು ನೀಡಿದ ಐದು ಉಪನ್ಯಾಸಗಳನ್ನು ಈ ವಿಚಾರ ಸಂಕಿರಣ ಒಳಗೊಂಡಿದೆ.

ವೃತ್ತಿಪರರು ಇಂಧನ ಪರಿವರ್ತನೆ, ವೇಗವರ್ಧನೆ ಮತ್ತು ವಸ್ತುಗಳ ವಿನ್ಯಾಸದಲ್ಲಿನ ಪ್ರಗತಿಯನ್ನು ಚರ್ಚಿಸಲಿದ್ದಾರೆ, ವೈಜ್ಞಾನಿಕ ನಾವೀನ್ಯತೆಯನ್ನು ಪರಿಸರ ಮತ್ತು ಆರ್ಥಿಕ ಸುಸ್ಥಿರತೆಯೊಂದಿಗೆ ಸಂಯೋಜಿಸುವಲ್ಲಿ ಭಾರತದ ಪಾತ್ರದ ಕುರಿತು ಚರ್ಚಿಸುವರು.

Udayavani, Date: 08/05/25, p, no - 04_Sudina